C.R.P.67

Form No.4 (Civil)
Deposition Sheets
(R.P.No.57)

**2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್ ಸಿ ಸಂಖ್ಯೆಃ113/2023 (C/W Sc No.101/2023)**

ಪ್ರಾಸಾ. 01 ಚಾಸಾ. 01

| | |
|---|---|
| ಸಾಕ್ಷಿದಾರರ ಹೆಸರು | ಅಭಿಷೇಕ್ ಡಿ ಎನ್ |
| ತಂದೆಯ ಹೆಸರು | ನಾಗರಾಜು |
| ವಯಸ್ಸು | 29 ವರ್ಷಗಳು |
| ಉದ್ಯೋಗ | ವ್ಯವಸಾಯ |
| ವಾಸ | ದೊಡ್ಡಅರಸನಕೆರೆ |

ಸಾಕ್ಷಿಯನ್ನು ದಿನಾಂಕಃ20.03.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ಚಾಸಾ-2 ಮತ್ತು 3 ನನ್ನ ಸ್ನೇಹಿತರು, ಮೃತ ಅರುಣ ಉಃ ಕಪ್ಪೆ ನನ್ನ ಸ್ನೇಹಿತರು, ಚಾಸಾ-4 ಮತ್ತು 5, 9 ಗೊತ್ತು, 6 ರಿಂದ 8 ಗೊತ್ತಿಲ್ಲ. ಈ ಪ್ರಕರಣದಲ್ಲಿ ಹಾಗೂ ನ್ಯಾಯಾಲಯ ಮುಂದೆ ಇರುವ 4 ಮತ್ತು 5ನೇ ಆರೋಪಿ ಗೊತ್ತಿಲ್ಲ, ಉಳಿದ ಆರೋಪಿ ಗೊತ್ತು, ಸದರಿಯವರು ನಮ್ಮ ಗ್ರಾಮದವರು.

2. ಸುಮಾರು ಎರಡು ವರ್ಷದ ಹಿಂದೆ ನಾನು ಮತ್ತು ಅರುಣ ಹಾಗೂ ಚಾಸಾ-3 ರವರು ಮಧ್ಯಾಹ್ನ ಊಟಕ್ಕೆ ಅರುಣರವರಿಗೆ ಸೇರಿದ ದ್ವಿಚಕ್ರ ವಾಹನದಲ್ಲಿ ಕೆ.ಎಂ.ದೊಡ್ಡಿಯಲ್ಲಿರುವ ಮಿಲ್ಟ್ರಿ ಹೋಟೆಲ್ ಗೆ ಹೋಗಿ ನಂತರ ನಮ್ಮ ಊರಿನ ಸರ್ಕಲ್ ಬಳಿ ಬಂದು ನನಗೆ ಬೇರೆ ಕೆಲಸ ಇದ್ದ ಕಾರಣ ಅರುಣನ ವಾಹನ ತೆಗೆದುಕೊಂಡು ಅರುಣನನ್ನು ಅಲ್ಲೇ ಇಳಿಸಿ ನಂತರ ಅಮಿತ್ ಗೆ ಆತನ ಮನೆ ಬಳಿ ಇಳಿಸಿ ನಾನು ನಮ್ಮ ಮನೆಗೆ ಹೋದೆ. ನಾನು ಮನೆಗೆ ಹೋದ ನಂತರ ಮಧ್ಯಾಹ್ನ 3.00 ರಿಂದ 3.30 ಗಂಟೆ ಸಮಯದಲ್ಲಿ ಕಾಳಮ್ಮನ ದೇವಸ್ಥಾನದ ಪಕ್ಕ ಸಹಕಾರ ಸೊಸೈಟಿ ಬಳಿ ಯಾರೋ ಅರುಣನ

ಜೊತೆ ಗಲಾಟೆ ಮಾಡುತ್ತಿದ್ದಾರೆ ಎಂದು ರಸ್ತೆಯಲ್ಲಿ ಜನ ಮಾತನಾಡಿಕೊಂಡು ಹೋಗುತ್ತಿದ್ದರು ಅದನ್ನು ನಾನು ಕೇಳಿಸಿಕೊಂಡೆ. ನನ್ನ ಸ್ನೇಹಿತ ನನಗೆ ಕರೆ ಮಾಡಿ ಅರುಣನಮೇಲೆ ಗಲಾಟೆ ಆಗಿ ಅವನು ಪ್ರಜ್ಞೆ ತಪ್ಪಿ ಬಿದ್ದಿದ್ದಾನೆ ಎಂದು ಹೇಳಿದ, ಆಗ ನಾನು ಮತುತ ನನ್ನ ಸ್ನೇಹಿತ ಸುರೇಶನನ್ನು ಕರೆದುಕೊಂಡು ಹೊಗಿ ನೋಡಿದಾಗ 20-30 ಜನರು ಗುಂಪು ಸೇರದ್ದರು, ಅರುಣ್ ಪ್ರಜ್ಞೆ ತಪ್ಪಿ ಬಿದ್ದಿದ್ದನ್ನು ನಾನು ನೋಡಿದೆ, ಆತನ ಮೈಮೇಲೆ, ಮುಖ ಕತ್ತಿನಿಂದ ರಕ್ತ ಸುರಿಯುತ್ತಿತ್ತು.

**3.** ನಂತರ ನಾನು ಮತ್ತು ಚಾಸಾ-2 ಸೇರಿ ಆತನಿಗೆ ಆಸ್ಪತ್ರೆಗೆ ಕರೆದುಕೊಂಡು ಹೋದೆವು, ನಾನು ಹಿಂದೆ ಕುಳಿತುಕೋಂಡು, ಚಾಸಾ-2 ರವರು ವಾಹನ ಚಾಲನೆ ಮಾಡುತ್ತಿದ್ದರು. ಅರುಣ್ ರವರಿಗೆ ಕೆ.ಎಂ.ದೊಡ್ಡಿ ಮಾದೇಗೌಡ ಖಾಸಗಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ನಂತರ ವೈದ್ಯರು ಪರೀಕ್ಷಿಸಿ ಹೆಚ್ಚಿನ ಚಿಕಿತ್ಸೆಗೆ ಸೀರಿಯಸ್ ಇದೆ ಬೇರೆ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ಹೇಳಿದರು. ಅರುಣ್ ರವರ ತಂದೆ ಮತ್ತು ಚಿಕ್ಕಪ್ಪ ಹಾಗೂ ದೊಡ್ಡಪ್ಪನ ಮಕ್ಕಳು ಆಸ್ಪತ್ರೆಗೆ ಬಂದಿದ್ದರು. ನಂತರ ಸದರಿಯವರು ಅರುಣ್ ಗೆ ಚಿಕಿತ್ಸೆಗಾಗಿ ಮೈಸೂರಿಗೆ ಕರೆದುಕೊಂಡು ಹೋದರು ಎಂದು ಗೊತ್ತಾಯಿತು. ಆಸ್ಪತ್ರೆಗೆ ಪೊಲೀಸರು ಬಂದಿದ್ದರು, ನಾನು ಅರುಣನನ್ನು ಕರೆದುಕೊಂಡು ಹೋಗಿದ್ದರಿಂದ ನನ್ನನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಏನು, ಎತ್ತ ಎಂದು ಕೇಳಿದರು, ನಾನು ವಿಷಯ ತಿಳಿಸಿದೆ, ಪೊಲೀಸರು ನನ್ನ ಸಹಿ ಪಡೆದುಕೊಂಡರು. ಆದರೆ ಅದರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ನಾನು ಸ್ವತಃ ದೂರು ನೀಡಿರುವುದಿಲ್ಲ. ಆರೋಪಿತರು ಅರುಣ್ ರವರಿಗೆ ಹಲ್ಲೆ ಮಾಡಿದುದನ್ನು ನಾನು ನೋಡಿರುವುದಿಲ್ಲ. ಆಸ್ಪತ್ರೆಗೆ ಅರುಣನನ್ನು ಕರೆದುಕೊಂಡು ಹೋಗುವ ಸಮಯದಲ್ಲಿ ಆರೋಪಿತರು ಹಲ್ಲೆ ಮಾಡಿರುವುದನ್ನು ನಾನು ನೋಡಿರುವುದಿಲ್ಲ. ಈಗ ದೂರನ್ನು ನೋಡುತ್ತಿದ್ದು, ಸದರಿ ದೂರಿನಲ್ಲಿ ನನ್ನ ಸಹಿ ಇರುತ್ತದೆ, ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. (ಸದರಿ ಪ್ರತಿಯನ್ನು ಎಸ್.ಸಿ.101/2023 ರ ಕಡತದಲ್ಲಿ ಇಡಲಾಗಿದೆ.)

**4.** ಈಗ ಒಂದು ಮಹಜರನ್ನು ನೋಡುತ್ತಿದ್ದು, ಸದರಿ ಮಹಜರಿನಲ್ಲಿ ನನ್ನ ಸಹಿ ಇರುತ್ತದೆ, ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. (ಸದರಿ ಪ್ರತಿಯನ್ನು ಎಸ್.ಸಿ.101/2023 ರ ಕಡತದಲ್ಲಿ ಇಡಲಾಗಿದೆ.)

ಅದೇ ರೀತಿ ಎರಡು ಬಾವಚಿತ್ರಗಳನ್ನು ತೋರಿಸುತ್ತಿದ್ದು, ಅದರಲ್ಲಿ ಸಾಕ್ಷಿ ಇದ್ದಾನೆ ಎಂದು ಒಪ್ಪಿಕೊಂಡಿದ್ದರಿಂದ ಸದರಿ ಬಾವಚಿತ್ರಗಳನ್ನು ನಿಪಿ-3(1 ಮತ್ತು 2) ಎಂದು ಗುರುತಿಸಲಾಯಿತು. (ಸದರಿ ಪ್ರತಿಯನ್ನು ಎಸ್.ಸಿ.101/2023 ರ ಕಡತದಲ್ಲಿ ಇಡಲಾಗಿದೆ.) ಅದೇ ರೀತಿ ಇನ್ನೊಂದು ಮಹಜರನ್ನು ನೋಡುತ್ತಿದ್ದು, ಸದರಿ ಮಹಜರಿನಲ್ಲಿ ನನ್ನ ಸಹಿ ಇರುತ್ತದೆ, ಅದನ್ನು ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. (ಸದರಿ ಪ್ರತಿಯನ್ನು ಎಸ್.ಸಿ.101/2023 ರ ಕಡತದಲ್ಲಿ ಇಡಲಾಗಿದೆ.) ಅದೇ ರೀತಿ ಎಂಟು ಬಾವಚಿತ್ರಗಳನ್ನು ತೋರಿಸುತ್ತಿದ್ದು, ಅದರಲ್ಲಿ ಸಾಕ್ಷಿ ಇದ್ದಾನೆ ಎಂದು ಒಪ್ಪಿಕೊಂಡಿದ್ದರಿಂದ ಸದರಿ ಬಾವಚಿತ್ರಗಳನ್ನು ನಿಪಿ-5(1 ರಿಂದ 8) ಎಂದು ಗುರುತಿಸಲಾಯಿತು. ಸದರಿ ಮಹಜರ್ ಗಳಿಗೆ ನಾನು ಠಾಣೆಯಲ್ಲಿ ಘಟನೆ ನಡೆದಿದ್ದ ಮಾರನೇ ದಿನ ಸಹಿಮಾಡಿರುತ್ತೇನೆ. ಸದರಿ ಮಹಜರಿನಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ಮಹಜರ್ ಮಾಡುವ ಸಮಯದಲ್ಲಿ ಪೊಲೀಸರು ನನ್ನ ಮುಂದೆ ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿರುವುದಿಲ್ಲ. ಸದರಿ ಮಹಜರಿಗೆ ನಾನಲ್ಲದೇ ಬೇರೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಪಿ-3 ರಲ್ಲಿ ಕಾಣುವ ಎರುಡ ಬಾವಚಿತ್ರಗಳನ್ನು ಸೊಸೈಟಿಯ ಮುಂಭಾಗದಲ್ಲಿ ತೆಗೆದಿರುತ್ತಾರೆ. ಮತ್ತು ನಿಪಿ-5 ರಲ್ಲಿರುವ ಬಾವಚಿತ್ರಗಳನ್ನು ಕೆ.ಎಂ.ದೊಡ್ಡಿ ರಸ್ತೆಯಲ್ಲಿ ತೆಗೆದಿರುತ್ತಾರೆ. ಸದರಿ ಬಾವಚಿತ್ರಗಳಲ್ಲಿ ದೊಣ್ಣೆ ಮತ್ತು ಗೊದ್ದಮೊಟ್ಟೆ ನೀಡಿತ್ತಿರುವ ದೃಶ್ಯ ಕಾಣುತ್ತದೆ.

5. ಈಗ ಇನ್ನೊಂದು ಮಹಜರನ್ನು ನೋಡುತ್ತಿದ್ದು, ಸದರಿ ಮಹಜರಿನಲ್ಲಿ ನನ್ನ ಸಹಿ ಇರುತ್ತದೆ, ಅದನ್ನು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. (ಸದರಿ ಪ್ರತಿಯನ್ನು ಎಸ್.ಸಿ.101/2023 ರ ಕಡತದಲ್ಲಿ ಇಡಲಾಗಿದೆ.) ಅದೇ ರೀತಿ ಒಂದು ಬಾವಚಿತ್ರವನ್ನು ತೋರಿಸುತ್ತಿದ್ದು, ಅದರಲ್ಲಿ ಸಾಕ್ಷಿ ಇದ್ದಾನೆ ಎಂದು ಒಪ್ಪಿಕೊಂಡಿದ್ದರಿಂದ ಸದರಿ ಬಾವಚಿತ್ರಗಳನ್ನು ನಿಪಿ-7 ಎಂದು ಗುರುತಿಸಲಾಯಿತು. (ಸದರಿ ಪ್ರತಿಯನ್ನು ಎಸ್.ಸಿ.101/2023 ರ ಕಡತದಲ್ಲಿ ಇಡಲಾಗಿದೆ.) ಸದರಿ ಸಹಿಯನ್ನೂ ಸಹ ಪೊಲೀಸ್ ಠಾಣೆಯಲ್ಲಿ ಪಡೆದಿರುತ್ತಾರೆ. ಪೊಲೀಸರು ಘಟನೆ ದಿನ ನಾನು ಧರಿಸಿದ್ದ ಬಟ್ಟೆ ಅರುಣನ ರಕ್ತದ ಕಲೆಯಾಗಿದ್ದ ಕಾರಣ ಅಮಾನತುಪಡಿಸಿಕೋಂಡಿದ್ದರು, ಆ ಸಮಯದಲ್ಲಿ ನಾನು ಮಹಜರಿಗೆ ಸಹಿ ಹಾಕಿರುತ್ತೇನೆ. ಆ ದಿನ ಪೊಲೀಸರು ನನ್ನ ರಕ್ತದ ಕಲೆಯಿರುವ

ಒಂದು ಷರ್ಟು ಮತ್ತು ಪ್ಯಾಂಟನ್ನು ಅಮಾನತುಪಡಿಸಿಕೊಂಡಿದ್ದರು. ಈಗ ನ್ಯಾಯಾಲಯದಲ್ಲಿ ಸಾಕ್ಷಿಗೆ ಪ್ರತ್ಯೇಕಾವಾ ಬಟ್ಟೆಯಲ್ಲಿ ಕಟ್ಟಿ ಮೊಹರು ಮಾಡಿಲಾದ ಒಂದು ನೀಲಿ ಬಣ್ಣದ ಜೀನ್ಸ್ ಪ್ಯಾಂಟ್ ಮತ್ತು ಕೆಂಪು ಬಣ್ಣದ ತುಂಬುತೋಳಿನ ಷರ್ಟ್ ತೋರಿಸಿದ್ದು, ಸಾಕ್ಷಿ ಸದರಿ ಬಟ್ಟೆಯನ್ನು ತನ್ನದು ಎಂದು ಒಪ್ಪಿಕೊಂಡಿದ್ದ ಕಾರಣ ಸದರಿ ಷರ್ಟ್ ಮತ್ತು ಪ್ಯಾಂಟನ್ನು ಒಟ್ಟಾಗಿ ಮು.ಮ.1 ಎಂದು ಗುರುತಿಸಲಾಯಿತು. (ಸದರಿ ಪ್ರತಿಯನ್ನು ಎಸ್.ಸಿ.101/2023 ರ ಕಡತದಲ್ಲಿ ಇಡಲಾಗಿದೆ.) ಉಳಿದ ವಸ್ತುಗಳನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ. ಪೊಲೀಸರು ಪುನಃ ನನ್ನ ವಿಚಾರಣೆ ಮಾಡಿರುವುದಿಲ್ಲ ಮತ್ತು ನನ್ನ ಹೇಳಿಕೆ ಪಡೆದುಕೊಂಡಿರುವುದಿಲ್ಲ. ಆ ದಿನ ನಾವು ಮೃತ ಅರುಣನ ಜೊತೆ ಊಟಕ್ಕೆ ಹೆದ ಸಮಯದಲ್ಲಿ ಆತ ಆರಾಮಾಗಿದ್ದು ಆತ ಬೇರೆಯವರ ಜೊತೆ ಮೊಬೈಲಿನಲ್ಲಿ ಮಾತನಾಡುತ್ತಿರಲಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಕಡತದಲ್ಲಿರುವ ಅಂಶಗಳನ್ನು ಪರಿಗಣಿಸಲಾಗಿ ಸಾಕ್ಷಿದಾರರು ಅಭಿಯೋಜನೆಯ ಕೇಸಿಗೆ ವಿರುದ್ಧವಾಗಿ ಸಾಕ್ಷಿ ನುಡಿಯುತ್ತಿರುವುದು ಕಂಡುಬರುತ್ತದೆ. ಈ ಕಾರಣದಿಂದ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರನ್ನು ಪಾಟೀ ಸವಾಲಿಗೆ ಒಳಪಡಿಸಲು ಮಾನ್ಯ ಸರ್ಕಾರಿ ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ನಾನು 10 ನೇ ತರಗತಿ ಓದಿರುತ್ತೇನೆ, ಮತ್ತು ಡಿಗ್ರಿ ಪೂರ್ಣ ಮುಗಿಸಿರುವುದಿಲ್ಲ ಆದರೆ ಮಧ್ಯದಲ್ಲಿ ಡಿಸ್ಕಂಟಿನ್ಯೂ ಮಾಡಿರುತ್ತೇನೆ. ಡಿಪ್ಲೊಮಾ 2 ನೇ ವರ್ಷ ಪೂರ್ಣ ಮಾಡಿರುತ್ತೇನೆ. ನಾನು ವ್ಯವಸಾಯ ಮಾಡುತ್ತೇನೆ.

2. ನಾನು ಘಟನೆ ಆಗಿದೆ ಎಂದು ಹೇಳುವ ದಿಃ20.11.2022 ರಂದು ಆಗಿರುತ್ತದೆ ಎಂದರೆ ಸರಿ. ಆ ದಿನ ನಾವು ಅರುಣನ ಜೊತೆ ಊಟ ಮಾಡುವ ಸಮಯದಲ್ಲಿ ಯಾವುದೇ ಹಣಕಾಸಿನ ವಿಚಾರವಾಗಿ ಆತ ಯಾರೋ ಜೊತೆಯಲ್ಲಿ ಮೊಬೈಲಿನಿಂದ ಸುಮಾರು ಹೊತ್ತು ಟೆನ್ಷನ್ನಿಂದ ಮಾತನಾಡುತ್ತಿದ್ದ ಎಂದರೆ ಸರಿಯಲ್ಲ. ಆ ದಿನ ನಾವು ಸದರಿ ವಿಚಾರ ವಿಚಾರಿಸಿಲ್ಲ ಎಂದರೆ ಸರಿಯಲ್ಲ. ನಾವು ಆ ದಿನ ಊಟ ಮುಗಿಸಿಕೊಂಡು ದೊಡ್ಡಅರಸಿನಕರ ಸೊಸೈಟಿ ಬಳಿ ಸಂಜೆ 4.00 ಸಮಯದಲ್ಲಿ ಬಂದಾಗ ಎಲ್ಲಾ ಆರೋಪಿತರು

ಗುಂಪುಗಟ್ಟಿಕೊಂಡು ಅರುಣನ ಬಳಿ ಬಂದು ಯಾವುದೋ ಹಳೇ ದ್ವೇಷದಿಂದ ಎಲ್ಲಾ ಆರೋಪಿತರು ಅವನಿಗೆ ಬೊಳಿಬಮಗನೆ, ಸೂಳೆಮಗನೆ, ನಿನ್ನನ್ನು ಈ ದಿವಸ ತೀರಿಸುತ್ತೇವೆ ಎಂದು ಬೈದು 1, 2 ಮತ್ತು 4 ನೇ ಆರೋಪಿತರು ಅಲ್ಲೇ ಬಿದ್ದಿದ್ದ ದೋಣ್ಣೆ ಮತ್ತು ಕಲ್ಲಿನಿಂದ ಅರುಣನ ಮೈಕೈಮೇಲೇ ಹೊಡೆದರು ಎಂದರೆ ಸರಿಯಲ್ಲ. ಆಗ ನಾನು ಮತ್ತು ಚಾಸಾ-2, 3 ಹಾಗೂ ಅಲ್ಲೇ ಹೋಗುತ್ತಿದ್ದ ಚಾಸಾ-4 ಮತ್ತು ಇತರೆ ಜನರು ಬಿಡಿಸಿದಾಗ ಆರೋಪಿತರಲ್ಲರೂ ಹೊರಟು ಹೋದರು ಎಂದರೆ ಸರಿಯಲ್ಲ.

3. ನಂತರ ಆತನನ್ನು ಬೈಕಿನಲ್ಲಿ ಕೂರಿಸಿಕೊಂಡು ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕಾದಾಗ ಸಂಜೆ 4.00 ಗಂಟೆ ಸಮಯದಲ್ಲಿ ದೇವರಹಳ್ಳಿ ಕೆ.ಎಂ. ರಸ್ತೆಯ ಕಲುವೆ ಬಳಿ ಎಲ್ಲಾ ಆರೋಪಿತರು ಮೋಟಾರು ಬೈಕು ಮತ್ತು ಆಟೋವಿನಲ್ಲಿ ಬಂದು ನಮ್ಮ ವಾಹನವನ್ನು ಅಡ್ಡ ಹಾಕಿದರು ಎಂದರೆ ಸರಿಯಲ್ಲ. ಆಗ ನಾನು ಆಸ್ಪತ್ರೆಗೆ ಕರೆದುಕೊಂಡು ಹೊಗುತ್ತಿದ್ದೇವೆ ಬಿಡ್ರಲ್ಲ ಎಂದು ಹೇಳಿ, ನಾವು ಕೆಳಗೆ ಇಳಿದು ಹೇಳುತ್ತಿದ್ದಾಗ ಏಕಾಏಕಿ 1, 2, 4 ಆರೋಪಿತರು ಮನಸೋ ಇಚ್ಚೆ ಬಂದಂತೆ ಅರುಣನನ್ನು ಕೊಲೆ ಮಾಡುವ ಉದ್ದೇಶದಿಂದ ಅವರು ತಂದಿದ್ದ ಕಲ್ಲಿನಿಂದ ತಲೆಯ ಮೇಲೆ ತೀವ್ರವಾಗಿ ಹಲ್ಲೆ ಮಾಡಿದರು ಎಂದರೆ ಸರಿಯಲ್ಲ. ತಲೆ ಓಪನ್ ಆಗಿ ರಕ್ತ ಸುರಿಯುತ್ತಿತ್ತು, 1, 2 ಮತ್ತು 4 ನೇ ಆರೋಪಿತರು ಈತನನ್ನು ಉಳಿಸಬೇಡಿ, ಸಾಯಿಸಿಬಿಡಿ ಎಂದು ಹೇಳುತ್ತಿದ್ದರು ಎಂದರೆ ಸರಿಯಲ್ಲ. ನಾವು ಗಾಬರಿಯಿಂದ ಜೋರಾಗಿ ಕಿರುಚಿಕೊಂಡಾಗ ಅಲ್ಲೇ ಹೋಗುತ್ತಿದ್ದ ಜನರು ನಮ್ಮ ಬಳಿ ಬರುವುದನ್ನುನೋಡಿ ಆರೋಪಿತರು ದೊಣ್ಣೆ ಮತ್ತು ಕಲ್ಲುಗಳನ್ನು ಸ್ಥಳದಲ್ಲೇ ಬಿಸಾಕಿ ಅವರುಗಳು ಬಂದಿದ್ದ ಆಟೋ ಮತ್ತು ಬೈಕಿನಲ್ಲಿ ಹೊರಟು ಹೋದರು ಎಂದರೆ ಸರಿಯಲ್ಲ. ಪ್ರಜ್ಞೆ ತಪ್ಪಿ ಬಿದ್ದಿದ್ದ ಅರುಣನನ್ನು ನಾನು ಮತ್ತು ಸುರೇಶ ಬೈಕಿನಲ್ಲಿ ಹಾಕಿಕೊಂಡು ಮಾದೇಗೌಡ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಪ್ರಥಮ ಚಿಕಿತ್ಸೆ ಕೊಡಿಸಿ ನಂತರ ವೈದ್ಯರು ಹೆಚ್ಚಿನ ಚಿಕಿತ್ಸೆಗಾಗಿ ಸೂಚಿಸಿದಾಗ ಚಾಸಾ-15 ರವರು ಮೈಸೂರಿನ ಯಾವುದೋ ಖಾಸಗಿ ಆಸ್ಪತ್ರೆಗೆ ಆಂಬುಲೆನ್ಸ್ ನಲ್ಲಿ ಕರೆದುಕೊಂಡು ಹೋದರು ಎಂದರೆ ಸರಿ. ಅದೇ ದಿನ ನಾನು ಸ್ವತಃ ಸಂಜೆ 6.30 ಗಂಟೆ ಸಮಯದಲ್ಲಿ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

(ನ್ಯಾಯಾಲಯದ ಪ್ರಶ್ನೆ: ನನಗೆ ಕನ್ನಡ ಓದಲು ಬರೆಯಲು ಬರುತ್ತದೆ, ಈ ಹಂತದಲ್ಲಿ ಸಾಕ್ಷಿಗೆ ನ್ಯಾಯಾಲಯದಲ್ಲಿ ನಿಪಿ-1 ರಲ್ಲಿ ಬರೆದಿರುವ ನಾಲ್ಕು ಲೈನುಗಳನ್ನು ತನ್ನ ಕೈಬರಹದಲ್ಲಿ ಬರೆಯಲು ಹೇಳಲಾಗಿ, ಸಾಕ್ಷಿ ತನ್ನ ಕೈಬರಹದಲ್ಲಿ ಒಂದು ಬಿಳಿ ಹಾಳೆಯಲ್ಲಿ ಬರೆದಿರುತ್ತಾರೆ. ಸಾಕ್ಷಿ ತೆರೆದ ನ್ಯಾಯಾಲಯದಲ್ಲಿ ತನ್ನ ಕೈಬರಹದಲ್ಲಿ ಬರೆದ ಬರವಣಿಗೆಯನ್ನು ನಿಪಿ-1(ಬಿ) ಎಂದು ಗುರುತಿಸಿ, ಕಡತದಲ್ಲಿ ಇಡಲಾಯಿತು.)

4. ದಿ:21.11.2022 ರಂದು ದೊಡ್ಡಅರಸಿನಕೆರೆ ಗ್ರಾಮದ ಪ್ರಾಥಮಿ ಕೃಷಿ ಪತ್ತಿನ ಸಹಕಾರ ಸಂಘದ ಬಳಿ ಪೊಲೀಸರು ಬಂದಾಗ ನಾನು ಕೃತ್ಯ ನಡೆದ ಸ್ಥಳವನ್ನು ತೋರಿಸಿದ್ದು, ಸ್ಥಳದಲ್ಲಿ ರಕ್ತದ ಕಲೆಯಿರುವ ಒಂದು ಹಿಡಿ ಗಾತ್ರದ ಕಾಂಕ್ರಿಟ್ ಕಲ್ಲು, ರಕ್ತ ಮಿಶ್ರಿತ ಮಣ್ಣು ಮತ್ತು ಸಾದಾ ಮಣ್ಣನ್ನು ನನ್ನ ಸಮಕ್ಷಮ ಅಮಾನತುಪಡಿಸಿಕೊಂಡು 'ಕೆ' ಎಂಬ ಅಕ್ಷರದಿಂದ ಸೀಲ್ ಮಾಡಿಕೊಂಡು ಬೆಳಿಗ್ಗೆ 6.30 ರಿಂದ 7.30 ಗಂಟೆಯವರೆಗೆ ಚಾಸಾ-10 ಮತ್ತು 11 ರವರ ಸಮಕ್ಷಮ ಮಹಜರ್ ಮಾಡಿ ವಸ್ತುಗಳನ್ನು ಅಮಾನತುಪಡಿಸಿಕೊಂಡರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಿಪಿ-3(1 ಮತ್ತು 2) ನ್ನು ತೆಗೆಯಲಾಗಿರುತ್ತದೆ ಎಂದರೆ ಸರಿಯಲ್ಲ.

5. ಆ ನಂತರ ಪುನ: ಕೆ.ಎಂ.ದೊಡ್ಡಿ ಗ್ರಾಮದ ದೇವರಹಳ್ಳಿ ರಸ್ತೆಯಲ್ಲಿರುವ ನಂಜಮ್ಮ ಕೋಂ ದಾಸೇಗೌಡರ ವಾಸದ ಮನೆಯ ಮುಂದಿನ ರಸ್ತೆಯಲ್ಲಿ ಪುನ: ಅರುಣನಿಗೆ ಹಲ್ಲೆ ಮಾಡಿದ ಸ್ಥಳ ಎಂದು ತೋರಿಸಿದ ಮೇರೆಗೆ ನನ್ನ ಸಮಕ್ಷಮ ರಸ್ತೆಯ ಮೇಲೆ ಬಿದ್ದಿದ್ದ ರಕ್ತವನ್ನು ನೀರಿನಲ್ಲಿ ಒರೆಸಿದ ಹತ್ತಿ, ಎರಡು ದೊಣ್ಣೆ, ಒಂದು ಗೊದಮೊಟ್ಟೆ, ರಕ್ತ ಮಿಶ್ರಿತ ಮಣ್ಣು, ಸಾದಾ ಮಣ್ಣು, ರಕ್ತದ ಕಲೆಯಿರುವ ಹುಲ್ಲುಗಳನ್ನು ಅಮಾನತುಪಡಿಸಿಕೊಂಡು 'ಕೆ' ಎಂಬ ಅಕ್ಷರದಿಂದ ಸೀಲ್ ಮಾಡಿ ಚಾಸಾ-10 ಮತ್ತು 11 ರವರ ಸಮಕ್ಷವ ಬೆಳಿಗ್ಗೆ 7.45 ರಿಂದ 8.45 ಗಂಟೆಯವರೆಗೆ ನಿಪಿ-4 ರಂತೆ ಮಹಜರ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ಹಂತದಲ್ಲಿ ಸಾಕ್ಷಿಗೆ ಮೇಲೆ ಹೇಳಿದ ವಸ್ತುಗಳನ್ನು ತೋರಿಸಿ ಸದರಿ ವಸ್ತುಗಳನ್ನು ನನ್ನ ಮುಂದೆ ಅಮಾನತುಪಡಿಸಿರುತ್ತಾರೆ ಎಂದು ಹೇಳಿದಾಗ ಸಾಕ್ಷಿ ಅಲ್ಲಗಳೆದಿರುತ್ತಾರೆ. ಸಾಕ್ಷಿಗೆ ತೋರಿಸಿದ ಕಾಂಕ್ರಿಟ್ ಕಲ್ಲು-ಮು.ಮ.2, ರಕ್ತ ಮಿಶ್ರಿತ ಮಣ್ಣು-3, ಸಾದಾ ಮಣ್ಣು-4,ಸಿಮೆಂಟ್ ರಸ್ತೆಯ ಮೇಲೆ ಬಿದ್ದಿದ್ದ ರಕ್ತದ ಕಲೆ-5, ಒಂದು 0.3.11 ದೊಣ್ಣೆ-6, ಇನ್ನೊಂದು 0.1.8 ದೊಣ್ಣೆ-7, ಗೊದಮೊಟ್ಟೆ-8, ರಕ್ತ ಮಿಶ್ರಿತ ಮಣ್ಣು-

9, ಸಾದಾ ಮಣ್ಣು-10, ರಕ್ತ ಕಲೆಯಿರುವ ಹಲ್ಲು-11 ಎಂದು ಗುರುತಿಸಲಾಯಿತು. (ಸದರಿ ಪ್ರತಿಯನ್ನು ಎಸ್.ಸಿ.101/2023 ರ ಕಡತದಲ್ಲಿ ಇಡಲಾಗಿದೆ.) ಮು.ಮ.2 ರಿಂದ 11 ನಿಪಿ-4 ಮತ್ತು 6 ಮಹಜರ್ ಮಾಡುವ ಸಮಯದಲ್ಲಿ ಅಮಾನತುಪಡಿಸಿಕೊಂಡಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಿಪಿ-5(1 ರಿಂದ 8) ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

6. ನಾನು ದೂರು ನೀಡುವಾಗ ಗಾಬರಿಯಲ್ಲಿದ್ದುದರಿಂದ ಕಲ್ಲು ಮತ್ತು ದೊಣ್ಣೆಗಳಿಂದ ಹೊಡೆದಿದುದನ್ನು ಮಾತ್ರ ತಿಳಿಸಿದ್ದೆ, ಮುಂದುವರೆದು 1 ರಿಂದ 5ನೇ ಆರೋಪಿತರು ಅರುಣನನ್ನು ಹಿಡಿದುಕೊಂಡಿದ್ದು, 1ನೇ ಆರೊಪಿ ಕುತ್ತಿಗೆ ಪಟ್ಟಿ ಹಿಡಿದುಕೊಂಡು ಗಲಾಟೆ ಮಾಡುವಾಗ ಆತನ ಕೈಯನ್ನು ಮುಷಿಚಿ ಮಾಡಿ ಅರುಣನ ಮುಖಕ್ಕೆ ಹೊಡೆದ ಎಂದರೆ ಸರಿಯಲ್ಲ. 4ನೇ ಆರೋಪಿ ಅಲ್ಲೇ ಬಿದ್ದಿದ್ದ ಒಂದು ಕಾಂಕ್ರಿಟ್ ಕಲ್ಲನ್ನು ಎತ್ತಿಕೊಂಡು ಅರುಣನ ಹಣೆ ಮೇಲೆ ಹೊಡೆದ, ಆಗ ಅವನು ಬಿದ್ದು ಹೋದ ಎಂದರೆ ಸರಿಯಲ್ಲ ನಂತರ ಎಲ್ಲಾ ಆರೊಪಿತರು ಸೇರಿಕೊಂಡು ಅರುಣನ ಕಾಲು ಮತ್ತು ಕೈಗಳಿಂದ ಹೋಡೆದರು ಎಂದರೆ ಸರಿಯಲ್ಲ. 1ನೇ ಆರೋಪಿ ಅರುಣನ ಕುತ್ತಿಗೆ ಪಟ್ಟಿ ಹಿಡಿದು ಮೇಲಕ್ಕೆ ಎತ್ತಿ ಹಿಡಿದಾಗ 4ನೇ ಆರೋಪಿ ಕೆಳಗೆ ಬಿದಿದ್ದ ಕಲ್ಲನ್ನು 3ನೇ ಆರೋಪಿಗೆ ಎತ್ತು ಕೊಟ್ಟು ಅರುಣನ ತಲೆಗೆ ಹೊಡೆದರು ಎಂದರೆ ಸರಿಯಲ್ಲ.

7. ನಂತರ ಆಸ್ಪತ್ರೆಗೆ ದೇವರಹಳ್ಳಿ ಮಾರ್ಗವಾಗಿ ದಾಸೇಗೌಡರ ಮನೆ ಮುಂದೆ ಹೋಗುತ್ತಿದ್ದಾಗ 3, 4 ಮತ್ತು 5 ಬೈಕಿನಲಿ ಬಂದು ನಮ್ಮನ್ನು ಅಡ್ಡಗಟ್ಟಿದರು ಎಂದರೆ ಸರಿಯಲ್ಲ. ಆರೋಪಿಗಳಾದ 1 ರಿಂದ 7 ಅರುಣನಿಗೆ ಕಾಲಿನಿಂದ ಒದ್ದರು, ಆಗ ಅರುಣ ಪಕ್ಕದ ಹುಲ್ಲಿನ ಗದ್ದೆಗೆ ಹೋಗಿ ಬಿದ್ದಾಗ 6ನೇ ಆರೋಪಿ ಕಪ್ಪೆಯ ತಲೆಗೆ ಹೊಡೆದ ಎಂದರೆ ಸರಿಯಲ್ಲ. ಅರುಣನ ಕೊಲೆ ಮಾಡವ ಉದ್ದೇಶದಿಂದ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಹೇಳಿಕೆಯನ್ನು ನಿಪಿ-8 ಎಂದು ಗುರುತಿಸಲಾಯಿತು. (ಸದರಿ ಪ್ರತಿಯನ್ನು ಎಸ್.ಸಿ.101/2023 ರ ಕಡತದಲ್ಲಿ ಇಡಲಾಗಿದೆ.)

8. ದಿ:24.11.2022 ರಂದು ನಾನು ನನ್ನ ಬಟ್ಟೆಗಳನ್ನು ಪೊಲೀಸರ ಮುಂದೆ ಹಾಜರುಪಡಿಸಿದೆ ಎಂದರೆ ಸಾಕ್ಷಿ ಮಾರನೆ ದಿನ ಹಾಜರುಪಡಿಸಿದೆ ಎಂದು ನುಡಿಯುತ್ತಾರೆ.

ಮೃತ ಅರುಣ ಅದೇ ದಿನ ಅಂದರೆ ಘಟನೆ ನಡೆದ ದಿನ ರಾತ್ರಿ **11.00** ಗಂಟೆಗೆ ಮೃತಪಟ್ಟಿರುತ್ತಾನೆ ಎಂದರೆ ಸರಿ. ನಾನು ಘಟನೆಯನ್ನು ಕಣ್ಣಾರೆ ನೋಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಘಟನೆಯನ್ನು ಕಣ್ಣಾರೆ ನೋಡಿ ನಾನೇ ಸ್ವತಃ ದೂರನ್ನು ನೀಡಿದ್ದರೂ ಆರೋಪಿತರು ನಮ್ಮ ಗ್ರಾಮದವರಾಗಿದ್ದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಜರ್ ಗಳು ನನ್ನ ಸಮಕ್ಷಮ ಮಾಡಿ ಮು.ಮ.ಗಳನ್ನು ನನ್ನ ಸಮಕ್ಷಮ ಅಮಾನತುಪಡಿಸಿಕೊಂಡಿದ್ದರೂ ಸಹ ಈಗ ಆ ಬಗ್ಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. **4** ಮತ್ತು **5** ನೇ ಆರೋಪಿತರು ನನಗೆ ಗೊತ್ತಿರುತ್ತಾರೆ ಎಂದರೆ ಸರಿಯಲ್ಲ. ಅರುಣ ಆರೋಪಿತರು ಹಲ್ಲೆ ಮಾಡಿದ ಕಾರಣ ತೀರಿಕೊಂಡಿರುತ್ತಾನೆ ಎಂದು ನನಗೆ ಗೊತ್ತಿದ್ದರೂ ಸಹ ಈಗ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿತನ ಪರ ಶ್ರೀ ಹೆಚ್.ಡಿ.ಆರ್. ವಕೀಲರಿಂದಃ</u>

ಮೃತ ಅರುಣ ನನ್ನ ಸ್ನೇಹಿತ. ಮೃತ ಅರುಣನ ಮೇಲೆ ಕೆ.ಎಂ.ದೊಡ್ಡಿ ಪೊಲೀಸ್ ಠಾಣೆಯಲ್ಲಿ ದರೋಡೆ ಪ್ರಕರಣಗಳು, ಹಲ್ಲೆ ಪ್ರಕರಣಗಳು ದಾಖಲಾಗಿರುತ್ತವೆ ಎಂಬ ವಿಚಾರ ನನಗೆ ಗೊತ್ತಿರುತ್ತದೆ ಎಂದರೆ ಸರಿ. ಪೊಲೀಸರು ಹೇಳಿದ ಮೇರೆಗೆ ಕೋರಿಕೆ ಮತ್ತು ನಿರ್ದೇಶದ ಮೇರೆಗೆ ಬಾವಚಿತ್ರಗಳಲ್ಲಿ ನಿಂತಿರುತ್ತೇನೆ ಎಂದರೆ ಸರಿ.

ಮರು ವಿಚಾರಣೆ ಇರುವುದಿಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ.

**2** ನೇ ಅಪರ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಮಂಡ್ಯ.